# ಚೌಕ ಪೊಲೀಸ ಠಾಣೆಯ ಕಾರ್ಯಾಚರಣೆ 13 ದ್ವಿ-ಚಕ್ರ ವಾಹನಗಳನ್ನು ಕಳ್ಳತನ ಮಾಡಿದ ಕಳ್ಳರ ಬಂಧನ

ಈ ದಿವಸ ಮಾನ್ಯ ಶ್ರೀ ಡಾ:ವೈ.ಎಸ್.ರವಿಕುಮಾರ ಪೊಲೀಸ್ ಆಯುಕ್ತರು ಕಲಬುರಗಿ ನಗರ, ಶ್ರೀ ಅಡ್ಡೂರು ಶ್ರೀನಿವಾಸುಲು ಉಪ ಪೊಲೀಸ್ ಆಯುಕ್ತರು (ಕಾ&ಸು), ಶ್ರೀ ಶ್ರೀಕಾಂತ ಕಟ್ಟಿಮನಿ ಉಪ ಪೊಲೀಸ್ ಆಯುಕ್ತರು (ಅ&ಸಂ) ಕಲಬುರಗಿ ನಗರ ಹಾಗೂ ಶ್ರೀ ದೀಪನ್.ಎಂ.ಎನ ಸಹಾಯಕ ಪೊಲೀಸ್ ಆಯುಕ್ತರು (ಉತ್ತರ) ಉಪವಿಭಾಗ ಕಲಬುರಗಿ ನಗರ ರವರ ಮಾರ್ಗದರ್ಶನದಂತೆ ಶ್ರೀ ರಾಜಶೇಖರ.ವಿ.ಹಳಗೋದಿ ಪೊಲೀಸ್ ಇನ್ಸಪೆಕ್ಟರ ಚೌಕ ಪೊಲೀಸ್ ಠಾಣೆ ಕಲಬುರಗಿ ನಗರ ರವರ ನೇತೃತ್ವದಲ್ಲಿ ಬಸವರಾಜ ಪಿಎಸಐ(ಕಾ&ಸು), ಶ್ರೀಮತಿ ಶಶಿಕಲಾ ಪಿಎಸಐ(ಅವಿ), ಅವರ ಸಿಬ್ಬಂದಿ ಜನರಾದ ಹುಸೇನಬಾಷಾ ಎಎಸಐ, ಶಿವಶರಣಪ್ಪಾ ಎಎಸಐ, ಉಮೇಶ, ಸಿದ್ರಾಮಯ್ಯ, ಸಂಜೀವಕುಮಾರ, ನಾಗೇಂದ್ರ, ಅಶೋಕ ರವರನ್ನೊಳಗೊಂಡ ತಂಡ ಇಂದು ದಿನಾಂಕ:15.03.2022 ರಂದು ಬೆಳಿಗ್ಗೆ ತಾಜಸುಲ್ತಾನಪೂರ ರೋಡಿನ ಮೇಲೆ ನಂಬರ ಪ್ಲೇಟ ಇರಲಾರದ ಮೋಟರ ಸೈಕಲ ಮೇಲೆ ಸಂಶಾಸ್ಪದವಾಗಿ ತಿರುಗಾಡುತ್ತಿರುವಾಗ ಹಿಡಿದು ವಿಚಾರಣೆಗೆ ಒಳಪಡಿಸಿದಾಗ ದ್ವಿ-ಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಭೂಪಾಲ ತೆಗ್ಗನೂರ ಗ್ರಾಮದ ಭೀಮಾಶಂಕರ ಜಿವಣಗಿ ಮತ್ತು ಆಳಂದ ಚೆಕ್‌ಪೊಸ್ಟ ಹತ್ತಿರದ ಅವನ ಗೆಳೆಯರು ಬೈಕ್ ಕಳ್ಳರನ್ನು ಹಿಡಿದು ವಿಚಾರಿಸಿ ಅವರಿಂದ ಸುಮಾರು 4 ಲಕ್ಷ ಬೆಲೆಬಾಳುವ ಒಟು 13 ದ್ವಿ-ಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸದರಿ ಪ್ರಕರಣದಲ್ಲಿಯ ಆರೋಪಿತರನ್ನು ಹಿಡಿಯುವಲ್ಲಿ ಯಶಸ್ವಿಗೊಂಡ ಚೌಕ ಪೊಲೀಸ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಶ್ಲಾಘಿಸಲಾಗಿದೆ.